ನಾಯಕರು ಘೋಷಿಸಿದರು. PAPಯ ವಿರುದ್ಧ ಅದಕ್ಕೆ ಅವಕಾಶಗಳಿಲ್ಲದಿದ್ದರೂ ಕಾರಿಗೆ ಲೌಡ್ ಸ್ಪೀಕರ್‌ಗಳನ್ನು ಹಾಕಿಕೊಂಡು ಉಡಾಳರು, ಬೀದಿಕಳ್ಳರು ಅಲ್ಲಿ ದೊಡ್ಡ ಗದ್ದಲ ಸೃಷ್ಟಿಸಿದ್ದರು. ಉಮೋಫಿಯಾದಲ್ಲಿ ಅದೆಷ್ಟು ಹಣ ಎಂದು ಹೇಳಲಾಗದಿದ್ದರು ಅವರು ದೊಡ್ಡ ಮೊತ್ತವನ್ನು ಕಳೆದುಕೊಳ್ಳುವವರಿದ್ದರು. ಆದರೆ ಪ್ರಚಾರಕರು ಮಾತ್ರ ಶ್ರೀಮಂತರಾಗುವುದರಲ್ಲಿ ಸಂಶಯವಿಲ್ಲ.

ಹಿಂದಿನ ರಾತ್ರಿಯವರೆಗೆ ರೂಫ್‌ನ ಯೋಜನೆಯಂತೆ ಎಲ್ಲವೂ ಸಾಗಿತ್ತು. ಆಗ POP ಪ್ರಚಾರಕ ತಂಡದ ಮುಖ್ಯಸ್ಥ ರೂಫ್ ಮನೆಗೆ ಅನಿರೀಕ್ಷಿತ ಭೇಟಿಕೊಟ್ಟ. ರೂಫ್‌ಗೆ ಆತನಿಗೆ ಪರಿಚಿತನಾಗಿದ್ದು ಸ್ನೇಹಿತ ಎಂದರೂ ಸರಿಯೆ. ಅದೊಂದು ತಣ್ಣನೆಯ ವ್ಯಾವಹಾರಿಕ ಭೇಟಿಯಾಗಿತ್ತು. ಆತ ಹೆಚ್ಚು ಪದಗಳನ್ನು ವ್ಯಯಿಸಲಿಲ್ಲ. ರೂಫ್‌ನ ಮುಂದೆ ಐದು ಪೌಂಡ್‌ಗಳ ನೋಟನ್ನು ಇಟ್ಟು ನುಡಿದ, 'ನಮಗೆ ನಿನ್ನ ಮತ ಬೇಕು'. ಕುರ್ಚಿಯಿಂದ ಮೇಲೆದ್ದ ರೂಫ್‌ನ ಹೊರಗಿನ ಬಾಗಿಲು ಹಾಕಿ ಬಂದ. ಆ ಕ್ಲುಪ್ತ ಸಮಯ ಅವನ ಮುಂದಿನ ಆಯ್ಕೆಯ ಬಗ್ಗೆ ತೂಗಿ ನೋಡುವಂತೆ ಮಾಡಿತ್ತು. ನೆಲದ ಮೇಲಿನ ಕೆಂಪು ನೋಟು. ಅವನನ್ನು ಸೆಳೆದಿತ್ತು. ನೆಲದ ಮೇಲಿದ್ದ ಕೋಕೋ ಕೊಯ್ಲು ಮಾಡುತ್ತಿದ್ದ ರೈತನ ಚಿತ್ರ ಮಂತ್ರ ಮುಗ್ಧನನ್ನಾಗಿ ಮಾಡಿತ್ತು.

'ನಿನಗೆ ಗೊತ್ತು, ನಾನು ಮಾರ್ಕೋಸ್ ಪರ ಕೆಲಸ ಮಾಡುತ್ತಿದ್ದೇನೆ' ಎಂದು ಕ್ಷೀಣಧ್ವನಿಯಲ್ಲಿ ನುಡಿದ, 'ಇದು ಒಳ್ಳೆಯದಲ್ಲ'.

'ನೀನು ಮತ ಚಲಾಯಿಸುವಾಗ ಮಾರ್ಕೋಸ್ ಅಲ್ಲಿರುವುದಿಲ್ಲ. ಈ ರಾತ್ರಿ ನಾನು ಮಾಡಬೇಕಾದ ಕೆಲಸ ಸಾಕಷ್ಟಿದೆ. ಈಗೇನು ನೀನು ತಗೋತಿಯೋ ? ಇಲ್ವೋ?'

'ಹೊರಗೆ ಯಾರು ಕೇಳಿಸಿಕೊಳ್ಳುತ್ತಿಲ್ಲ ತಾನೇ?'

'ನಮಗೆ ಬೇಕಾಗಿರುವುದು ಓಟು. ಗಾಳಿಸುದ್ದಿಯಲ್ಲ.'

'ಆಲ್ ರೈಟ್' ಇಂಗ್ಲೀಷಿನಲ್ಲಿ ಉಸುರಿದ ರೂಫ್. ವ್ಯಕ್ತಿ ಮೊಣಕೈಯಿಂದ ತನ್ನ ಸಹಾಯಕನನ್ನು ತಿವಿದ. ಆತ ಕೆಂಪುವಸ್ತ್ರದಿಂದ ಮುಚ್ಚಲ್ಪಟ್ಟ ವಸ್ತುವೊಂದನ್ನು ಮುಂದೆ ತಂದ. ಜೇಡಿಮಣ್ಣಿನ ಮಡಿಕೆಯೊಳಗೆ ಪುಕ್ಕಗಳಿಂದ ಆವೃತ್ತವಾದ ಹೆದರಿಕೆ ಹುಟ್ಟಿಸುವ ಪುಟ್ಟ ಮೂರ್ತಿ.

'ಅಮ್ಮ ಮೊಟಾಟದಿಂದ ಬಂದಿದ್ದಾಳೆ. ಇದರ ಅರ್ಥ ನಿನಗೆ ಗೊತ್ತಿದೆ. ಇದರ ಮೇಲೆ ಪ್ರಮಾಣ ಮಾಡು. ಮಬೂಕನಿಗೆ ಮತ ಹಾಕುತ್ತೇನೆಂದು. ಏನಾದರೂ ತಪ್ಪಿದಲ್ಲಿ ಅಮ್ಮ ನೋಡಿಕೊಳ್ಳುತ್ತಾಳೆ.'

ರೂಫ್‌ನ ಹೃದಯ ನಡುಗಿತು. ಈ ವಿಷಯದಲ್ಲಿ ಅಮ್ಮನ ಖ್ಯಾತಿ ಆತನಿಗೆ ಗೊತ್ತಿತ್ತು. ಆದರೆ ಅವನು ಶೀಘ್ರ ನಿರ್ಧಾರ ತೆಗೆದುಕೊಳ್ಳುವ ವ್ಯಕ್ತಿ. ನನ್ನದೊಂದು ಮತ ಮಾರ್ಕೋಸ್‌ನ ಖಚಿತ ಗೆಲುವನ್ನು ಬದಲಾಯಿಸಲಾದಿತೇ? ಇಲ್ಲ.

'ನಾನು ಮಡೂಕನಿಗೆ ವೋಟ್ ಮಾಡ್ತೇನೆ. ಅಮ್ಮನ ಪ್ರಮಾಣ ಏನೂ ಬೇಕಿಲ್ಲ.'

'ದಟ್ಸ್ ಆಲ್' ಆತನ ಸಹಚರ ವಸ್ತುವನ್ನು ಮೊದಲಿನಂತೆ ಮುಚ್ಚುತ್ತಿದ್ದಂತೆ ಕಾರಿನ ಬಳಿಗೆ ಹೊರಡುತ್ತಾ ನುಡಿದ. 'ಮಾರ್ಕೋಸ್‌ನ ಎದುರು ಅವನಿಗೆ ಯಾವ ಅವಕಾಶವು ಇಲ್ಲವೆಂದು ನಿನಗೂ ಗೊತ್ತು' ಬಾಗಿಲಿನ ಬಳಿ ನುಡಿದ ರೂಫ್.

'ಕೆಲವೇ ವೋಟ್‌ಗಳು ಬಂದರೂ ಸಾಕು. ಮುಂದಿನ ಬಾರಿ ಹೆಚ್ಚಿನ ವೋಟ್ ಪಡೆಯುತ್ತೇವೆ. ಜನರಿಗೆ ನಾವು ಪೌಂಡ್‌ನ ದೊಡ್ಡ ಹಣ ಕೊಡುತ್ತಿದ್ದೇವೆ. ಶಿಲ್ಲಿಂಗ್‌ಗಳ ಚಿಲ್ಲರೆ ಅಲ್ಲ ಎಂದು ಗೊತ್ತಾದರೆ ಸಾಕು– ಆಗ ಎಲ್ಲರೂ ಖಂಡಿತ ಮಾತು ಕೇಳುತ್ತಾರೆ.'